ಇ) ಇದರಲ್ಲಿ ರೈತರಿಗೆ ಪಾವತಿಯಾಗದೆ ಇರುವ ಹಣವೆಷ್ಟು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು):

ಅ) ತಾತ್ಕಾಲಿಕ ಅಂದಾಜುಗಳ ಪ್ರಕಾರ ರಾಜ್ಯದಲ್ಲಿ 2001-02ನೇ ಸಾಲಿನ ಮುಂಗಾರು, ಹಿಂಗಾರು, ಬೇಸಿಗೆ ಹಂಗಾಮುಗಳಲ್ಲಿ ಉತ್ಪಾದನೆಯಾದ ಆಹಾರ ಪದಾರ್ಥಗಳು ಕ್ರಮವಾಗಿ 55.14, 19,24, ಹಾಗೂ 8.67 ಲಕ್ಷ ಟನ್ ಯಿದ್ದು ಒಟ್ಟಾರೆ 83.05 ಲಕ್ಷ ಟನ್ ಆಗಿದೆ.

ಆ) 2001-02ನೇ ಸಾಲಿನ ಖಾರೀಫ್ ಋತುಮಾನದಲ್ಲಿ ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮವು ಬೆಂಬಲ ಬೆಲೆ ಯೋಜನೆಯಡಿಯಲ್ಲಿ ರೈತರಿಂದ ಈ ಕೆಳಗಿನಂತೆ ಆಹಾರಧಾನ್ಯಗಳನ್ನು ಖರೀದಿಸಿದೆ:

1. ಮೆಕ್ಕೆ ಜೋಳ 17782.974 ಮೆ.ಟನ್
2. ರಾಗಿ 77598.393 ಮೆ.ಟನ್
3. ಭತ್ತ 110.425 ಮೆ.ಟನ್

ಬೆಂಬಲ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ಖರೀದಿಸಲು ರಾಜ್ಯ ಸರ್ಕಾರವು ರೂ. 50.10 ಕೋಟಿ ತೊಡಗಿಸಿದ್ದು ಈ ದಿಶೆಯಲ್ಲಿ ರೂ. 15.00 ಕೋಟಿ ಮಾತ್ರ ಕೇಂದ್ರ ಸರ್ಕಾರ (ಭಾರತ ಆಹಾರ ನಿಗಮವು) ಬಿಡುಗಡೆ ಮಾಡಿರುತ್ತದೆ.

ಇ) ದಾವಣಗೆರೆ: ಚಿತ್ರದುರ್ಗ ಜಿಲ್ಲೆಯಲ್ಲಿ ರೂ. 3.63 ಲಕ್ಷ ತುಮಕೂರು ಜಿಲ್ಲೆಯಲ್ಲಿ 14.62 ಲಕ್ಷ ಮತ್ತು ಬೆಂಗಳೂರು (ದಕ್ಷಿಣ) ರೂ. 2.50 ಲಕ್ಷ ಪಾವತಿ ಹೊರತುಪಡಿಸಿ, ಮಿಕ್ಕುಳಿದಂತೆ ರೈತರಿಗೆ ಪೂರ್ತಿ ಹಣ ಪಾವತಿ ಮಾಡಲಾಗಿದೆ. ಈ ಬಾಕಿ ಹಣವನ್ನು ಸಹ ರೈತರಿಗೆ ಪಾವತಿಸಲು ಜಿಲ್ಲಾ ವ್ಯವಸ್ಥಾಪಕರಿಗೆ ಹಣ ಬಿಡುಗಡೆ ಮಾಡಲಾಗಿದೆ.

ತುಮಕೂರ ವಲಯದಲ್ಲಿ ಹೇಮಾವತಿ ನಾಲೆಗೆ ಭೂಸ್ವಾಧೀನಕ್ಕೆ ಹಣ ಬಿಡುಗಡೆ

140(167) ಶ್ರೀ ಲಕ್ಷ್ಮೀನಾರಾಯಣ.ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ವಲಯದಲ್ಲಿ ಹೇಮಾವತಿ ನಾಲೆಗೆ ಭೂಸ್ವಾಧೀನ ಪ್ರಕ್ರಿಯೆ ಯಾವಾಗ ಪ್ರಾರಂಭ ಆಯಿತು;

ಆ) ಭೂಸ್ವಾಧೀನ ಆದನಂತರ ಆ ರೈತನಿಗೆ ಎಷ್ಟು ದಿನದಲ್ಲಿ ಹಣ ಸಂದಾಯವಾಗುವುದು;

ಇ) ಹಣ ಸಂದಾಯಕ್ಕಾಗಿ ಯಾವ ಮಾನದಂಡ ಅನುಸರಿಸಲಾಗಿದೆ;

ಈ) ಹಾಗಿದ್ದಲ್ಲಿ, ಅನೇಕ ವರ್ಷಗಳಿಂದ ಉಳಿದಿರುವ ಪ್ರಕರಣಗಳು ಇದ್ದು ಈಗ ಹೊಸದಾಗಿ ಭೂಸ್ವಾಧೀನ ಪ್ರಕ್ರಿಯೆಗೆ ತಕ್ಷಣ ಹಣ ಕೊಡಲು ಕಾರಣವೇನು;

ಉ) ಹಿಂದಿನ ವರ್ಷಗಳಲ್ಲಿರುವ ಪ್ರಕರಣಗಳು ಎಷ್ಟು; ಈ ವರ್ಷದ ಹೊಸ ಪ್ರಕರಣಗಳೆಷ್ಟು;

ಊ) ಹೊಸ ಪ್ರಕರಣಗಳಿಗೆ ಈ ವರ್ಷ ಎಷ್ಟು ಹಣ ಸಂದಾಯ ಮಾಡಲಾಗಿದೆ;

ಋ) ಹಿಂದಿನ ಪ್ರಕರಣಗಳನ್ನು ಮುಚ್ಚಿ ಹಾಕಲು ಸಂಚು ನಡೆದಿದೆಯೇ;

ಎ) ಅಸಿಂಧು ಆಗಿರುವ ಪ್ರಕರಣಗಳನ್ನು ಯಾವ ರೀತಿ ಮುಂದುವರೆಸಲಾಗುವುದು;

ಏ) ಹಿಂದಿನ ವರ್ಷಗಳ ಪರಿಹಾರಕ್ಕೆ ಬಡ್ಡಿ ಸಮೇತ ಹಣವನ್ನು ನೀಡಲಾಗುವುದೆ?

ಶ್ರೀ ಹೆಚ್.ಕೆ. ಪಾಟೀಲ್ (ತುರುವೇಕೆರೆ) (ಜಲ ಸಂಪನ್ಮೂಲ ಸಚಿವರು):

ಅ) ತುಮಕೂರು ಹೇಮಾವತಿ ನಾಲಾ ವಲಯ ಕಛೇರಿಯು ಮೇ 1987 ರಿಂದ ಕಾರ್ಯಾರಂಭವಾಗಿದ್ದು ನಾಲಾ ಪಂಕ್ತಿಕರಣಗಳ ಅನುಮೋದನೆ ಜೊತೆಗೆ ಭೂಸ್ವಾಧೀನ ಪ್ರಕ್ರಿಯೆಗಳನ್ನು ಸಹ ಪ್ರಾರಂಭಿಸಲಾಗಿರುತ್ತದೆ.

ಆ) ಭೂಸ್ವಾಧೀನ ಕಾಯ್ದೆ ಪ್ರಕಾರ 6(1) ಅಧಿಸೂಚನೆ ಪ್ರಕಟಣೆಗೊಂಡ 2 ವರ್ಷದೊಳಗೆ ಅವಾರ್ಡ್ ಅನುಮೋದನೆ ಪಡೆದು ಪರಿಹಾರ ಪಾವತಿಸಬೇಕಾಗಿರುತ್ತದೆ. ಅನುದಾನ ಹಾಗೂ ಹಣ ಭರವಸೆ ಪತ್ರದ ಲಭ್ಯತೆ ಆಧರಿಸಿ ಪರಿಹಾರ ಪಾವತಿಸಲು ಕ್ರಮ ಕೈಗೊಂಡಿರುತ್ತದೆ.

ಇ) ಭೂಸ್ವಾಧೀನ ಕಾಯ್ದೆಗೆ ಅನುಗುಣವಾಗಿ ಅವಾರ್ಡ್ ಅನುಮೋದನೆಯಾದ ನಂತರ ಅವಾರ್ಡ್‌ದಾರರಿಗೆ 12(2) ಅವಾರ್ಡ್ ನೋಟೀಸ್ ಜಾರಿ ಮಾಡಿ ಅವರುಗಳು ಪೂರ್ಣ ದಾಖಲಾತಿಗಳನ್ನು ಹಾಜರುಪಡಿಸಿದ ನಂತರ ಪರಿಹಾರ ಪಾವತಿಸಲಾಗುತ್ತಿದೆ.

ಈ) ಹಲವು ವರ್ಷಗಳ ಹಿಂದೆ ಭೂಸ್ವಾಧೀನದ ಹಳೆಯ ಪ್ರಕರಣಗಳಿಗೆ ಸಂಬಂಧಿಸಿದಂತೆ ಅಂದಾಜು ಮೊತ್ತದ ಶೇ. 50 ರಷ್ಟು ಹಣವನ್ನು ಅಂದರೆ ರೂ. 401.68 ಲಕ್ಷಗಳನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳಲ್ಲಿ ಠೇವಣಿ ಮಾಡಲಾಗಿರುತ್ತದೆ ಹಾಗೂ ನ್ಯಾಯಾಲಯ ಪ್ರಕರಣಗಳು ಮತ್ತು ಕಾಲಮಿತಿಯೊಳಗೆ ಅನುಷ್ಠಾನಗೊಳಿಸಬೇಕಾಗಿದ್ದ ಕೆಲವು ಯೋಜನೆಗಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ ಪ್ರಕರಣಗಳಿಗಾಗಿ ಪರಿಹಾರ ಮೊತ್ತದ ಶೇ. 50 ರಷ್ಟು ಮೊತ್ತವನ್ನು ಠೇವಣಿ ಮಾಡಲಾಗಿರುತ್ತದೆ. ಇತ್ತೀಚಿನ ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 108 ಭೂಸ್ವಾವ್ಯಾ 2000, ದಿ: 21-12-2000 ಮತ್ತು ಸಂಖ್ಯೆ: ಕಂಇ 42 ಭೂಸ್ವಾನ್ಯಾ 2001, ದಿ: 8-10-2001 ರನ್ವಯ 4(1) ಅಧಿಸೂಚನೆಗೆ ಮೊದಲು ಪರಿಹಾರ ಮೊತ್ತದ ಶೇ. 50 ರಷ್ಟನ್ನು ಹಾಗೂ ಉಳಿದ ಶೇ. 50 ರಷ್ಟು ಮೊತ್ತವನ್ನು 6(1) ಅಧಿಸೂಚನೆಗೆ ಮೊದಲು ಕಡ್ಡಾಯವಾಗಿ ಠೇವಣಿ ಮಾಡಬೇಕೆಂಬ ಷರತ್ತು ಇರುವ ಕಾರಣ, ಸಕಾಲದಲ್ಲಿ ಠೇವಣಿ ಮಾಡಲು ಸಾಧ್ಯವಾಗದಿರುವ ಪ್ರಕರಣಗಳು ಅಸಿಂಧುವಾಗಿದ್ದು, ಅಂತಹ ಪ್ರಕರಣಗಳಿಗೆ ಭೂಸ್ವಾಧೀನ ಕಾಯ್ದೆ ಪ್ರಕಾರ ಹೊಸದಾಗಿ 4(1)ರ ಅಧಿಸೂಚನೆ ಹೊರಡಿಸಲಾಗಿರುವುದು ಅನಿವಾರ್ಯವಾಗಿದ್ದು ರೈತರುಗಳ ಹಿತದೃಷ್ಟಿಯಿಂದ ಅಂತಹ ಪ್ರಕರಣಗಳಿಗೆ ಸಂಬಂಧಿಸಿದಂತೆ ಪರಿಹಾರ ಮೊತ್ತದ ಶೇ.50 ರಷ್ಟು ಹಣವನ್ನು ಠೇವಣಿ ಮಾಡಲಾಗಿರುತ್ತದೆ.

ಉ) ಹಿಂದಿನ ವರ್ಷಗಳಲ್ಲಿ 160 ಪ್ರಕರಣಗಳು ಬಾಲ್ತಿಯಲ್ಲಿದ್ದು, ಈ ವರ್ಷ 14 ಹೊಸ ಪ್ರಕರಣಗಳು ಬಾಲ್ತಿಯಲ್ಲಿರುತ್ತದೆ.

ಊ) 14 ಹೊಸ ಪ್ರಕರಣಗಳಿಗೆ ಭೂಪರಿಹಾರ ಮೊತ್ತದ ಶೇ. 50 ರಷ್ಟು ಹಣ ರೂ. 46.15 ಲಕ್ಷಗಳನ್ನು ಠೇವಣಿ ಮಾಡಲಾಗಿದೆ.

ಋ) ಇಲ್ಲ.

ಎ) ಹೊಸದಾಗಿ ಭೂಸ್ವಾಧೀನ ಕಾಯ್ದೆ ಕಲಂ 4(1)ರ ಅಧಿಸೂಚನೆ ಪ್ರಕರಣೆ ಹೊರಡಿಸುವ ಮೊದಲು ಶೇ. 50 ರಷ್ಟು ಭೂಪರಿಹಾರ ಮೊತ್ತವನ್ನು ಠೇವಣಿ ಮಾಡಿ ತದನಂತರ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಭೂಸ್ವಾಧೀನ ಕಾಯ್ದೆ ಕಲಂ 6(1) ಅಧಿಸೂಚನೆ ಪ್ರಕಟಣೆಗೆ ಮೊದಲು ಇನ್ನುಳಿದ ಶೇ.50 ರಷ್ಟು ಮೊತ್ತವನ್ನು ಠೇವಣಿಗೊಳಿಸಿ, ಅವಾರ್ಡ್ ಅನುಮೋದನೆ ಪಡೆದು, ಅವಾರ್ಡುದಾರರಿಗೆ 12(2) ನೋಟೀಸ್ ಜಾರಿಗೊಳಿಸಿ ಆದಷ್ಟು ಬೇಗ ಪರಿಹಾರ ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.

ಏ) ಭೂಸ್ವಾಧೀನ ಕಾಯ್ದೆ ಪ್ರಕಾರ 4(1)ರ ಅಧಿಸೂಚನೆ ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಅವಾರ್ಡ್ ತಯಾರಿಕೆವರೆಗೆ ಬಡ್ಡಿ ಸೇರಿಸಿ ಪಾವತಿಸುವ ನಿಯಮವಿದ್ದು ಅದರಂತೆ ಅವಾರ್ಡ್ ಅನುಮೋದನೆಯಾದ ಎಲ್ಲಾ ಭೂಸ್ವಾಧೀನ ಪ್ರಕರಣಗಳಲ್ಲಿ ಬಡ್ಡಿ ಸಮೇತ ಪರಿಹಾರ ಪಾವತಿಸಲಾಗಿದೆ.

ಹೇಮಾವತಿ ಯೋಜನೆಗೆ ಹಣ

141(168) - ಶ್ರೀ ಲಕ್ಷ್ಮೀನಾರಾಯಣ.ಎಂ.ಡಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ 3 ವರ್ಷದಿಂದ ಭಾರಿ ನೀರಾವರಿ ಇಲಾಖೆಗೆ ಎಷ್ಟು ಹಣ ನೀಡಲಾಗಿದೆ;

ಆ) ಹೇಮಾವತಿ ಯೋಜನೆಗೆ ಕಳೆದ 3 ವರ್ಷಗಳಿಂದ ಎಷ್ಟು ಹಣ ನೀಡಲಾಗಿದೆ; (ವಿವರ ನೀಡುವುದು)

ಇ) ಈ ಯೋಜನೆ ಯಾವಾಗ ಪ್ರಾರಂಭವಾಯಿತು; ಯಾವ ಅವಧಿಗೆ ಮುಗಿಯಬೇಕು;

ಈ) ಕಡಿಮೆ ಪ್ರಮಾಣದ ಹಣ ಕೊಟ್ಟರೆ ಯೋಜನೆ ಮುಗಿಸಲು ಸಾಧ್ಯವೇ;

ಉ) ಈ ಯೋಜನೆಗೆ ಸರ್ಕಾರ ತಿರಸ್ಕಾರ ಮನೋಭಾವ ಮಾಡಲು ಕಾರಣವೇನು;

ಊ) ಈ ಮೊದಲು ಎಷ್ಟು ಹಣ ನೀಡಲಾಗಿತ್ತು; ಕಾಮಗಾರಿ ಮುಗಿದು 2 ವರ್ಷಗಳಾದರೂ ಬಿಲ್‌ಗಳನ್ನು ಪಾವತಿ ಮಾಡದಿರಲು ಕಾರಣವೇನು?

ಶ್ರೀ ಎಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕಳೆದ 3 ವರ್ಷಗಳಿಂದ ಭಾರಿ ನೀರಾವರಿಗೆ ಈ ಕೆಳಕಂಡಂತೆ ಹಣ ಪಾವತಿಸಿದೆ.

(Rs. in lakhs)

	H.A/c.4701	Cauvery	Krishna, Godavari	Others
1.	1999-2000	19911.35	14037.95	
2.	2000-2001	17463.12	13349.80	
3.	2001-2002	14781.28	10680.02	